# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್. ರಸ್ತೆ, ತುಮಕೂರು–572 103

**ಸಂಖ್ಯೆ :ತುವಿ:ವಿ.ವಿ.ಪ/ಸಿಂ.ವಿ/2022–23 / 5134** **ದಿನಾಂಕ: 13.02.2023**

ಇವರಿಗೆ,

ಮಾನ್ಯ ಸಿಂಡಿಕೇಟ್‌ನ ಎಲ್ಲಾ ಸದಸ್ಯರುಗಳಿಗೆ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಮಾನ್ಯರೆ,

**ವಿಷಯ: 2022–23ನೇ ಸಾಲಿನ ಪ್ರಥಮ ವಿಶೇಷ ಸಿಂಡಿಕೇಟ್ ಸಭೆಯ ಕಾರ್ಯಸೂಚಿಗಳನ್ನು ಕಳುಹಿಸುತ್ತಿರುವ ಕುರಿತು**

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ವಿಶ್ವವಿದ್ಯಾನಿಲಯದ 2022–23ನೇ ಸಾಲಿನ ಪ್ರಥಮ ವಿಶೇಷ ಸಿಂಡಿಕೇಟ್ ಸಭೆಯನ್ನು <u>ದಿನಾಂಕ:14.02.2023ರ ಮಂಗಳವಾರ 3:30 ಗಂಟೆಗೆ ಆನ್‌ಲೈನ್ ಮುಖಾಂತರ</u> ಏರ್ಪಡಿಸಲಾಗಿದ್ದು, ಸದರಿ ಸಭೆಯಲ್ಲಿ ಚರ್ಚಿಸಲಿರುವ ಕಾರ್ಯಸೂಚಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ, ಕಳುಹಿಸಲಾಗಿದೆ ಹಾಗೂ ಸದರಿ ಸಭೆಯ Online link ಅನ್ನು ಕಳುಹಿಸಿದ್ದು, ಮಾನ್ಯ ಸದಸ್ಯರುಗಳು ತಪ್ಪದೇ ಭಾಗವಹಿಸಲು ಈ ಮೂಲಕ ಕೋರಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಉಪಕುಲಸಚಿವರು
(ಸಿಂಡಿಕೇಟ್/ಶೈಕ್ಷಣಿಕ ಪರಿಷತ್ ವಿಭಾಗ)

ಅಡಕ: ಪ್ರಥಮ ವಿಶೇಷ ಸಿಂಡಿಕೇಟ್ ಸಭೆಯ ಕಾರ್ಯಸೂಚಿಗಳು

ಪ್ರತಿಗಳು:

1. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಕಚೇರಿ ಪ್ರತಿ.

# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು– 572 103

**ಸಭಾ ಸಂಖ್ಯೆ: ವಿ.ಸಿಂ–01** **ದಿನಾಂಕ: 14.02.2023** **ಸಮಯ: ಮಧ್ಯಾಹ್ನ: 3:30**

## 2022–23ನೇ ಸಾಲಿನ ಪ್ರಥಮ ವಿಶೇಷ ಸಿಂಡಿಕೇಟ್ ಸಭೆಯ ಕಾರ್ಯಸೂಚಿಗಳು

| ಕ್ರ. ಸಂ | ವಿಷಯ ಸಂಖ್ಯೆ | ಕಾರ್ಯಸೂಚಿ ವಿಷಯಗಳು | ಪುಟ ಸಂಖ್ಯೆ |
|---|---|---|---|
| | | **ಇಂಜಿನಿಯರಿಂಗ್ ವಿಭಾಗ** | |
| 1. | 2022–23:ವಿ.ಸಿಂ.01: ಇಂ.ವಿಭಾಗ–01 | ತುಮಕೂರು ವಿಶ್ವವಿದ್ಯಾನಿಲಯಕ್ಕೆ ವಿವಿಧ ಕಾಮಗಾರಿಗಳಿಗೆ / ಕೆಲಸಗಳಿಗೆ ತಾಂತ್ರಿಕ ಸಲಹಾ ಮತ್ತು ವಾಸ್ತುಶಿಲ್ಪ ಸೇವೆಯನ್ನು ಪಡೆಯುವ ಕುರಿತು. | 1 |
| | | **ಸಿಬ್ಬಂದಿ ವಿಭಾಗ** | |
| 2. | 2022–23:ವಿ.ಸಿಂ.01: ಸಿಬ್ಬಂದಿ ವಿಭಾಗ–02 | ಬೋಧಕ ಹುದ್ದೆಗಳ ನೇರ ನೇಮಕಾತಿ ಹಾಗೂ ಸಿ.ಎ.ಎಸ್. ಅಡಿಯಲ್ಲಿ ಪದೋನ್ನತಿಯ ಸಂಬಂಧ ಆಯ್ಕೆ ಮಂಡಳಿಗಳನ್ನು ರಚಿಸುವ ಸಂಬಂಧ ವಿಷಯ ಪರಿಣಿತರ ಪಟ್ಟಿಯನ್ನು ಅನುಮೋದಿಸುವ ಕುರಿತು. | 2 |
| | | **ಸಾಮಾನ್ಯ ಮತ್ತು ಅಭಿವೃದ್ಧಿ ವಿಭಾಗ** | |
| 3. | 2022–23:ವಿ.ಸಿಂ.01: ಸಾ&ಅ ವಿಭಾಗ–03 | ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಶ್ರೀ ಅನ್ನಪೂರ್ಣೇಶ್ವರಿ ಮಧ್ಯಾಹ್ನದ ಊಟ ಯೋಜನೆ ಪ್ರಾರಂಭಿಸುವ ಕುರಿತು. | 3 |

| ವಿಷಯ ಸಂಖ್ಯೆ: | 2022–23: ವಿ.ಸಿಂ.1 :ಇಂವಿ:01 ದಿನಾಂಕ: 14.02.2023 |
|---|---|

ವಿಷಯ: ತುಮಕೂರು ವಿಶ್ವವಿದ್ಯಾನಿಲಯಕ್ಕೆ ವಿವಿಧ ಕಾಮಗಾರಿಗಳಿಗೆ/ಕೆಲಸಗಳಿಗೆ ತಾಂತ್ರಿಕ ಸಲಹಾ ಮತ್ತು ವಾಸ್ತು ಶಿಲ್ಪ ಸೇವೆಯ ಕುರಿತು.

******

ತುಮಕೂರು ವಿಶ್ವವಿದ್ಯಾನಿಲಯದ ವಿವಿಧ ಕ್ಯಾಂಪಸ್‌ಗಳಲ್ಲಿ ಕೈಗೊಳ್ಳಬೇಕಾಗಿರುವ ವಿವಿಧ ಕಾಮಗಾರಿಗಳಿಗೆ ತಾಂತ್ರಿಕ ಸಲಹೆ ಹಾಗೂ ವಾಸ್ತುಶಿಲ್ಪ ಸೇವೆಯ ಟೆಂಡರ್‌ನ್ನು ದಿನಾಂಕ:19.09.2022ರಂದು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಆಹ್ವಾನಿಸಲಾಗಿತ್ತು. ದಿನಾಂಕ:20.09.2022ರಂದು ಹೊಸದಿಗಂತ ಹಾಗೂ ಡೆಕ್ಕನ್ ಹೆರಾಲ್ಡ್ ದಿನಪತ್ರಿಕೆಗಳಲ್ಲಿ ಟೆಂಡರ್ ಪ್ರಕಣೆಯನ್ನು ಹೊರಡಿಸಲಾಗಿರುತ್ತದೆ. ದಿನಾಂಕ:28.10.2022ರಂದು ತಾಂತ್ರಿಕಬಿಡ್‌ಗಳನ್ನು ತೆರೆಯಲಾಗಿದ್ದು ಭಾಗವಹಿಸಿದ ಏಜೆನ್ಸಿಗಳ ವಿವರ ಈ ಕೆಳಗಿನಂತಿದೆ.

| ಕ್ರ.ಸ | ಏಜೆನ್ಸಿಗಳ ಹೆಸರು |
|---|---|
| 1 | Basanth Consultants |
| 2 | RCA Studio Pvt Ltd |
| 3 | Aarna Consulting Engineers |
| 4 | Karekar & Associates |
| 5 | Ramamurthy Hombali & Associates |
| 6 | ACS Design Consulting Pvt Ltd |

ಭಾಗವಹಿಸಿದ ಒಟ್ಟು 06 ಏಜೆನ್ಸಿಗಳ ತಾಂತ್ರಿಕ ಬಿಡ್‌ಗಳನ್ನು ದಿನಾಂಕ:08.12.2022 ರಂದು ಜರುಗಿದ ಟೆಂಡರ್ ಪರಿಶೀಲನಾ ಸಮಿತಿಯ ಮುಂದೆ ಮಂಡಿಸಲಾಗಿರುತ್ತದೆ. ಸದರಿ ಬಿಡ್‌ಗಳನ್ನು ಪರಿಶೀಲಿಸಿದ ಸಮಿತಿಯು ಭಾಗವಹಿಸಿರುವ ಎಲ್ಲಾ ಏಜೆನ್ಸಿಗಳ ತಾಂತ್ರಿಕ ಬಿಡ್‌ಗಳನ್ನು ಕ್ರಮಬದ್ದವಾಗಿವೆಯೆಂದು ಶಿಫಾರಸ್ಸು ಮಾಡಿದ ಮೇರೆಗೆ ದಿನಾಂಕ: 19.12.2022 ರಂದು ಹಣಕಾಸು ಬಿಡ್‌ಗಳನ್ನು ತೆರೆಯಲಾಗಿದ್ದು, ಹಣಕಾಸು ಬಿಡ್‌ನ ಶಿಫಾರಸ್ಸು ಈ ಕೆಳಕಂಡಂತಿರುತ್ತದೆ. ಆರು ಏಜೆನ್ಸಿಗಳ ನಮೂದಿಸಿರುವ ದರಗಳನ್ನು Annexure – I ರಲ್ಲಿ ಲಗತ್ತಿಸಿದೆ. ಹಣಕಾಸು ಬಿಡ್‌ಗಳಲ್ಲಿ ನಮೂದಿಸಿದ ದರಗಳನ್ನು ಪರಿಶೀಲಿಸಿದ ಸಮಿತಿಯು ಈ ಕೆಳಗಿನಂತೆ ಕ್ರಮ ಜರುಗಿಸಲು ಶಿಫಾರಸ್ಸು ಮಾಡಿರುತ್ತದೆ.

**"ಹಣಕಾಸು ಬಿಡ್‌ನಲ್ಲಿ ಐಟಂವಾರು ಕಡಿಮೆ ದರ ನಮೂದಿಸಿರುವ ಏಜೆನ್ಸಿಗಳ ದರವನ್ನು ಪರಿಗಣಿಸಿ ಎಲ್ಲಾ ಏಜೆನ್ಸಿಗಳೊಂದಿಗೆ ದರ ಸಂಧಾನ ನಡೆಸಿ ನಮೂದಿಸಲಾಗಿರುವ ಐಟಂವಾರು ಕಡಿಮೆ ದರಕ್ಕೆ ಆ ಏಜೆನ್ಸಿಗಳು ಒಪ್ಪಿದ್ದಲ್ಲಿ ಎಂಪ್ಯಾನಲ್ ಮಾಡಿಕೊಳ್ಳುವಂತೆ ಸಮಿತಿಯು ಶಿಫಾರಸ್ಸು ಮಾಡಿರುತ್ತದೆ. ಐಟಂವಾರು ಕಡಿಮೆ ದರ ನಮೂದಿಸಿರುವ ಏಜೆನ್ಸಿಗಳ ವಿವರ ಹಾಗೂ ದರಗಳನ್ನು Annexure-II ನಲ್ಲಿ ಅಡಕಗೊಳಿಸಿದೆ."**

ಎಲ್ಲಾ ಆರು ಏಜೆನ್ಸಿಗಳನ್ನು ದರ ಸಂಧಾನಕ್ಕೆ ಆಹ್ವಾನಿಸಿದಾಗ ಈ ಕೆಳಕಾಣಿಸಿದ ಏಜೆನ್ಸಿಗಳು ಐಟಂವಾರು ಕಡಿಮೆ ದರಕ್ಕೆ ಸಮ್ಮತಿ ಸೂಚಿಸಿ ಒಪ್ಪಿಗೆ ಪತ್ರಗಳನ್ನು ನೀಡಿರುತ್ತಾರೆ. ಅವರುಗಳ ವಿವರ ಈ ಕೆಳಗಿನಂತಿದೆ.

| ಕ್ರ.ಸ | ಏಜೆನ್ಸಿಗಳ ಹೆಸರು | ಷರಾ |
|---|---|---|
| 1 | Basanth Consultants | **Annexure-II** ರಲ್ಲಿನ ಕ್ರಮ ಸಂಖ್ಯೆ 01 ರ ಐಟಂಗಳಿಗೆ ಮಾತ್ರ ಸಮ್ಮತಿ ಸೂಚಿಸಿರುತ್ತಾರೆ. |
| 2 | Aarna Consulting Engineers | **Annexure-II** ರಲ್ಲಿನ ಎಲ್ಲಾ ಐಟಂಗಳಿಗೂ ಸಮ್ಮತಿ ಸೂಚಿಸಿರುತ್ತಾರೆ. |
| 3 | Ramamurthy Hombali & Associates | |
| 4 | ACS Design Consulting Pvt Ltd | |

ಮೇಲ್ಕಾಣಿಸಿದ ನಾಲ್ಕು ಏಜೆನ್ಸಿಗಳನ್ನು ಎಂಪ್ಯಾನಲ್ ಮಾಡಿಕೊಳ್ಳಲು ಕ್ರಮವನ್ನು ಜರುಗಿಸಿರುವುದಕ್ಕೆ ಹಾಗೂ ಉಳಿದ ಎರಡು ಏಜೆನ್ಸಿಗಳಾದ RCA Studio Pvt Ltd ಮತ್ತು Karekar & Associates ಏಜೆನ್ಸಿಗಳು ಸದರಿ ದರಕ್ಕೆ ಸಮ್ಮತಿ ನೀಡದೇ ಇರುವುದರಿಂದ ಸದರಿ ಎರಡು ಸಂಸ್ಥೆಯವರನ್ನು ಎಂಪ್ಯಾನಲ್ ಪಟ್ಟಿಯಿಂದ ಕೈಬಿಡಲು ಕ್ರಮವನ್ನು ಜರುಗಿಸಿರುವುದಕ್ಕೆ ವಿಷಯವನ್ನುಸಿಂಡಿಕೇಟ್ ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2022-23/ವಿ.ಸಿಂ.-01: ಸಿಬ್ಬಂದಿ-01 ದಿನಾಂಕ:14.02.2023 |
|---|---|

**ವಿಷಯ : ಬೋಧಕ ಹುದ್ದೆಗಳ ನೇರ ನೇಮಕಾತಿ ಹಾಗೂ ಸಿ.ಎ.ಎಸ್. ಅಡಿಯಲ್ಲಿ ಪದೋನ್ನತಿಯ ಸಂಬಂಧ ಆಯ್ಕೆ ಮಂಡಳಿಗಳನ್ನು ರಚಿಸುವ ಸಂಬಂಧ ವಿಷಯ ಪರಿಣಿತರ ಪಟ್ಟಿಯನ್ನು ಅನುಮೋದಿಸುವ ಕುರಿತು.**

* * * * *

ವಿಶ್ವವಿದ್ಯಾನಿಲಯದಲ್ಲಿನ ಬೋಧಕ ಸಿಬ್ಬಂದಿಗಳಿಗೆ ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಮ್ ನಡಿಯಲ್ಲಿ ಪದೋನ್ನತಿ ನೀಡಲು ಹಾಗೂ ವಿಶ್ವವಿದ್ಯಾನಿಲಯದಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಈ ಹಿಂದೆ ಅಧ್ಯಯನ ಮಂಡಳಿಗಳ ಅಧ್ಯಕ್ಷರುಗಳಿಂದ ಪಡೆದಿದ್ದ ವಿಷಯ ಪರಿಣಿತರ ಪಟ್ಟಿಯನ್ನು ಈ ಹಿಂದೆ ದಿನಾಂಕ:22.11.2016ರ ಸಿಂಡಿಕೇಟ್ ಸಭೆಯು ಅನುಮೋದಿಸಿದ್ದು, ಈಗಾಗಲೇ ಸದರಿ ವಿಷಯ ಪರಿಣಿತರ ಪಟ್ಟಿಯನ್ವಯ ಆಯ್ಕೆ ಮಂಡಳಿಗಳನ್ನು ರಚಿಸಿ, ಪದೋನ್ನತಿ ನೀಡುವ ಸಂಬಂಧ ಅಗತ್ಯ ಕ್ರಮವಹಿಸಲಾಗಿರುತ್ತದೆ.

ಪ್ರಸ್ತುತ ವಿಶ್ವವಿದ್ಯಾನಿಲಯದಲ್ಲಿನ ಸ್ನಾತಕೋತ್ತರ ವಿಭಾಗಗಳು ಹಾಗೂ ಘಟಕ ಕಾಲೇಜುಗಳನ್ನೊಳಗೊಂಡಂತೆ ಖಾಲಿಯಿರುವ ಬೋಧಕ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಹಾಗೂ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ ಯು.ಜಿ.ಸಿ. ಸಿ.ಎ.ಎಸ್. ಅಡಿಯಲ್ಲಿ ಪದೋನ್ನತಿ ನೀಡಬೇಕಿರುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ 53ರಲ್ಲಿ ಮತ್ತು 2018ರ ಯು.ಜಿ.ಸಿ. ವಿನಿಯಮದ(ಪ್ಯಾರಾ 5.0)ರಲ್ಲಿ ವಿವರಿಸಿರುವಂತೆ(The experts in the subject concerned nominated by the Vice Chancellor out of the panel of names approved by the relevant statutory body of the university concerned.) ಮತ್ತು ಸದರಿ ವಿನಿಯಮವನ್ನು ಅಳವಡಿಸಿಕೊಂಡು ರಚಿಸಿ, ಅನುಮೋದನೆಗೊಂಡಿರುವ ವಿಶ್ವವಿದ್ಯಾನಿಲಯದ ಪರಿನಿಯಮದನ್ವಯ ಕೆಳಕಂಡ ವಿಷಯಗಳ ಆಯ್ಕೆ ಮಂಡಳಿಗಳ ಪುನರ್ ರಚನೆ ಅತ್ಯಗತ್ಯವಾಗಿರುತ್ತದೆ.

| ಕ್ರ.ಸಂ. | ವಿಷಯ |
|---|---|
| 1. | ಕನ್ನಡ |
| 2. | ಇಂಗ್ಲಿಷ್ |
| 3. | ಇತಿಹಾಸ |
| 4. | ಅರ್ಥಶಾಸ್ತ್ರ |
| 5. | ರಾಜ್ಯಶಾಸ್ತ್ರ |
| 6. | ಸಮಾಜಕಾರ್ಯ |
| 7. | ಸಮಾಜಶಾಸ್ತ್ರ |
| 8. | ಪತ್ರಿಕೋದ್ಯಮ |

(ಪು.ತಿ.ನೋ)

| | |
|---|---|
| 9. | ಭೌತಶಾಸ್ತ್ರ |
| 10. | ಸಾವಯವ ರಸಾಯನಶಾಸ್ತ್ರ |
| 11. | ಗಣಿತಶಾಸ್ತ್ರ |
| 12. | ಜೀವರಸಾಯನಶಾಸ್ತ್ರ |
| 13. | ಸಸ್ಯಶಾಸ್ತ್ರ |
| 14. | ಪ್ರಾಣಿಶಾಸ್ತ್ರ |
| 15. | ಜೈವಿಕ ತಂತ್ರಜ್ಞಾನ |
| 16. | ಗಣಕ ವಿಜ್ಞಾನ |
| 17. | ವಿದ್ಯುನ್ಮಾನ |
| 18. | ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ |
| 19. | ವಾಣಿಜ್ಯಶಾಸ್ತ್ರ |
| 20. | ಎಂ.ಬಿ.ಎ. |

ಮೇಲ್ಕಂಡ ವಿಷಯಗಳ ಪರಿಣಿತರ ಪಟ್ಟಿಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

| ವಿಷಯ ಸಂಖ್ಯೆ | 2022-23 ವಿ.ಸಿಂ-01/ ಸಾ/ಅ ವಿ-01 ದಿನಾಂಕ: 14.02.2023 |
|---|---|

**ವಿಷಯ: ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಶ್ರೀ ಅನ್ನಪೂರ್ಣೇಶ್ವರಿ ಮಧ್ಯಾಹ್ನದ ಊಟ ಯೋಜನೆ ಪ್ರಾರಂಭಿಸುವ ಕುರಿತು.**

*****

ತುಮಕೂರು ವಿಶ್ವವಿದ್ಯಾನಿಲಯಕ್ಕೆ ಜಿಲ್ಲೆಯಲ್ಲಿನ ವಿವಿಧ ದೂರದ ಗ್ರಾಮೀಣ ಪ್ರದೇಶಗಳಿಂದ ಸುಮಾರು 1500 ವಿದ್ಯಾರ್ಥಿಗಳು ವ್ಯಾಸಂಗಕ್ಕಾಗಿ ಆಗಮಿಸುತ್ತಿದ್ದಾರೆ. ದೈನಂದಿನ ಶೈಕ್ಷಣಿಕ ಚಟುವಟಿಕೆಗಳು ಬೆಳಿಗ್ಗೆ 8 ಗಂಟೆಗೆಯಿಂದಲೇ ಆರಂಭವಾಗುವುದರಿಂದ ಎಲ್ಲಾ ವಿದ್ಯಾರ್ಥಿಗಳು ಬೆಳಗ್ಗೆಯಿಂದ ಮಧ್ಯಾಹ್ನ/ಸಂಜೆಯವರಿಗೆ ಶೈಕ್ಷಣಿಕ ಅಭ್ಯಾಸಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ಬಹಳಷ್ಟು ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶಗಳಿಂದ ಆಗಮಿಸುತ್ತಿರುವುದರಿಂದ ಸಮಯಪಾಲನೆ ಮತ್ತು ನಿಗಧಿತ ಸಮಯಕ್ಕೆ ತರಗತಿಗಳಿಗೆ ಹಾಜರಾಗುವ ಕಾರಣಕ್ಕಾಗಿ ಊಟ/ಉಪಹಾರ ಸರಿಯಾದ ಸಮಯಕ್ಕೆ ಸೇವಿಸದೇ ಆಗಮಿಸುತ್ತಿರುವುದು ಕಂಡು ಬಂದಿರುತ್ತದೆ.

ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯಕ್ಕೆ ವ್ಯಾಸಂಗಕ್ಕಾಗಿ ಆಗಮಿಸುವ ಗ್ರಾಮೀಣ ವಿದ್ಯಾರ್ಥಿಗಳ ಆರೋಗ್ಯ ಮತ್ತು ಶೈಕ್ಷಣಿಕ ಹಿತದೃಷ್ಟಿಯಿಂದ ಅಂತಹ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದಲ್ಲಿ ಸುಮಾರು 1500 ವಿದ್ಯಾರ್ಥಿಗಳಿಗೆ ಕಡಿಮೆ ದರದಲ್ಲಿ ರೂ.5.00 ಗಳಿಗೆ ಊಟವನ್ನು ಒದಗಿಸುವ ಶ್ರೀ ಅನ್ನಪೂರ್ಣೇಶ್ವರಿ ಮಧ್ಯಾಹ್ನದ ಊಟದ ಯೋಜನೆಯನ್ನು ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊರೆ ಇಲ್ಲದೆ ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಸದರಿ ಯೋಜನೆಗೆ ತುಮಕೂರಿನ ದಾನಿಗಳು ಹಾಗೂ ಸಾರ್ವಜನಿಕರು ದೇಣಿಗೆ ನೀಡಲು ಒಪ್ಪಿರುತ್ತಾರೆ. ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.